ಕೊಟ್ಟರೆ, ಎಲ್ಲಾ ಸಂಬಂಧಪಟ್ಟೇ ದಾಖಲೆಗಳನ್ನು ಸೇರಿಸಿ, ಕೇಂದ್ರ ಸರಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿಕೊಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಷಫಿ ಅಹಮದ್ : ಜಿಲ್ಲಾ ಪರಿಷತ್‌ನವರು ಜಾಗ ಕೊಟ್ಟಿದ್ದಾರೆ.

ಅಧ್ಯಕ್ಷರು : ಸರಿ ಕೊಟ್ಟಿದ್ದರೆ ಮಾಡುತ್ತಾರೆ ಬಿಡಿ. ಈಗ ಪ್ರಶ್ನೋತ್ತರ ಕಾಲ ಮುಗಿಯಿತು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಹೊಸದುರ್ಗದಲ್ಲಿ ಮಿನಿ ವಿಧಾನಸೌಧ.

2598 - ಶ್ರೀ ಇ. ವಿಜಯಕುಮಾರ್(ಹೊಸದುರ್ಗ) : ಮಾನ್ಯ ಲೋಕೋಪಯೋಗಿ ಇಲಾಖೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಸದುರ್ಗದ ತಹಸೀಲ್ದಾರವರ ಕಛೇರಿ ಶಿಥಿಲವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹೊಸದುರ್ಗದ ಮಿನಿ ವಿಧಾನಸೌಧ ಕಟ್ಟಡವು ಪೂರ್ಣಗೊಳ್ಳದೆಯಿರಲು ಕಾರಣವೇನು ಹಾಗೂ ಈ ಕಟ್ಟಡ ಪೂರ್ಣಗೊಳ್ಳಲು ಎಷ್ಟು ಕಾಲ ಬೇಕಾಗುತ್ತದೆ?

ಶ್ರೀ ಜಿ.ಹೆಚ್. ಅಶ್ವಥ ರೆಡ್ಡಿ (ಲೋಕೋಪಯೋಗಿ ಮಂತ್ರಿಗಳು):

ಅ) ಬಂದಿದೆ.

ಆ) ಸಾಕಷ್ಟು ಅನುದಾನದ ಕೊರತೆಯಿಂದಾಗಿ ಪೂರ್ಣಗೊಂಡಿಲ್ಲ. ಈ ಕಾಮಗಾರಿಯನ್ನು ಹಣದ ಲಭ್ಯತೆಯನ್ನು ಆಧರಿಸಿ ಡಿಸೆಂಬರ್ 91ರ ಅಂತ್ಯದ ವೇಳೆಗೆ ಮುಗಿಸಲು ಯೋಜಿಸಲಾಗಿದೆ.

ಕೃಷ್ಣಾ ಮೇಲ್ದಂಡೆ ಯೋಜನೆಗೆ ಈವರೆಗೆ ಖರ್ಚಾಗಿರುವ ಹಣ

2674 - ಶ್ರೀ ಕೆ. ಹರ್ಷಕುಮಾರ ಗೌಡ (ಚಾಮರಾಜ) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷ್ಣಾ ಮೇಲ್ದಂಡೆ ಯೋಜನೆಗೆ ಈವರೆಗೆ ನಿರ್ಮಾಣ ಕಾರ್ಯಕ್ಕೆ ಖರ್ಚಾಗಿರುವ ಹಣವೆಷ್ಟು?

ಆ) ಈ ಯೋಜನೆಯನ್ನು ಪೂರ್ಣಗೊಳಿಸಲು ಬೇಕಾಗುವ ಅವಧಿ ಎಷ್ಟು?

ಇ) ಈ ಯೋಜನೆಯನ್ನು ಸಂಪೂರ್ಣವಾಗಿ ಕಾರ್ಯರೂಪಕ್ಕೆ ತರಲು ವೆಚ್ಚವಾಗುವ ಹಣವೆಷ್ಟು?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು):

ಅ) ಕೃಷ್ಣಾ ಮೇಲ್ದಂಡೆ ಯೋಜನೆಯ ಮೊದಲ ಘಟ್ಟಕ್ಕೆ ಇದುವರೆಗೆ ಖರ್ಚಾಗಿರುವ ಹಣ ರೂ. 660 ಕೋಟಿಗಳು.

ಆ) ಕಾರ್ಯಗತವಾಗುತ್ತಿರುವ ಕೃಷ್ಣಾ ಮೇಲ್ದಂಡೆ ಯೋಜನೆಯ ಮೊದಲ ಘಟ್ಟವನ್ನು 1966ರ ವೇಳೆಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.